7.	ನರಗುಂದ	59	1.54	386	6,83.880
8.	ಮುಂಡರಗಿ	68	1.785	15	40,800
9.	ಸವಣೂರು	125	3.208	26	6,40,300
10.	ಶಿಗ್ಗಾಂವ	181	4.603	185	4,62,000
11.	ಕುಂದಗೋಳ	101	2.651	212	5,13,600
12.	ಹಾನಗಲ್	259	6.628	497	10,55,200
13.	ಶಿರಹಟ್ಟಿ	91	5.143	184	48,320
14.	ಹಾವೇರಿ	234	5.948	121	3,43,000
15.	ಬ್ಯಾಡಗಿ	85	3.248	86	2,17,600
16.	ರಾಣಿಬೆನ್ನೂರ	187	4.83	186	4,46,400
17.	ಹಿರೇಕೆರೂರ	503	12.465	405	7,07,520
	ಒಟ್ಟು	2656	72.337	3664	82,71,460

ವಿಷಯ:- ಧಾರವಾಡ ಜಿಲ್ಲೆಯಲ್ಲಿ ಬೋಧಕ ಸಿಬ್ಬಂದಿ ಕೊರತೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 449 (644)

ಶ್ರೀ ಜವದೀಶ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿರುವ ಪದವಿಪೂರ್ವ ಶಿಕ್ಷಣ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ಒಟ್ಟು ಅನುದಾನಿತ ಮತ್ತು ಸರ್ಕಾರಿ ಕಾಲೇಜುಗಳ ಸಂಖ್ಯೆ ಎಷ್ಟು?

ಇ) ಜಿಲ್ಲೆಯಲ್ಲಿನ ಎಲ್ಲ ಅನುದಾನಿತ ಹಾಗೂ ಸರ್ಕಾರಿ ಕಾಲೇಜುಗಳಲ್ಲಿ ಬೋಧಕ ಸಿಬ್ಬಂದಿ ಹಾಗೂ ಇತರ ಸಿಬ್ಬಂದಿ ವರ್ಗವನ್ನು ಸೂಕ್ತ ರೀತಿಯಲ್ಲಿ ತುಂಬಲಾಗಿದೆಯೇ?

ಈ) ಬೋಧಕ ಸಿಬ್ಬಂದಿಗಳು ಇಲ್ಲದೇ ಇರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ತೀರಾ ಅನಾನುಕೂಲತೆಯುಂಟಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿರುವುದೇ? ಹಾಗಿದ್ದಲ್ಲಿ ಅದರ ನಿವಾರಣೆಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 153 ಪದವಿಪೂರ್ವ ಕಾಲೇಜುಗಳಿವೆ.

ಆ) ಅನುದಾನಿತ ಪದವಿಪೂರ್ವ ಕಾಲೇಜುಗಳು - 69

ಸರ್ಕಾರಿ ಪದವಿಪೂರ್ವ ಕಾಲೇಜುಗಳು - 29

ಇ) ಅನುದಾನಿತ ಪದವಿಪೂರ್ವ ಕಾಲೇಜುಗಳಲ್ಲಿ ಸ್ಟಾಪಿಂಗ್ ಪ್ಯಾಟರ್ನ್ ಪ್ರಕಾರ ತುಂಬಿದ ಉಪನ್ಯಾಸಕರ ಹುದ್ದೆಗಳನ್ನು ಅನುಮೋದಿಸಲಾಗುತ್ತಿದೆ. ಶಿಕ್ಷಕೇತರ ಸಿಬ್ಬಂದಿಯನ್ನು ಸರ್ಕಾರವು ನೀಡಿದ ಆದೇಶ ಸಂಖ್ಯೆ:ಇಡಿ 2 ಎಸ್‌ಇಪಿ 94 ದಿನಾಂಕ:31-8-94 ಮತ್ತು 24-6-96ರನ್ವಯ ತುಂಬಲು ಕ್ರಮ ಕೈಗೊಳ್ಳಲಾಗಿದೆ. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳನ್ನು (864) ಭರ್ತಿ ಮಾಡಲು ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ. ಆಯ್ಕೆಯಾದ ಉಪನ್ಯಾಸಕರುಗಳ ಪಟ್ಟಿಯು ಇಲಾಖೆಗೆ ಬಂದ ತಕ್ಷಣ ಖಾಲಿಯಿರುವ ಹುದ್ದೆಗಳಿಗೆ ಅವರುಗಳನ್ನು ನೇಮಿಸಲಾಗುವುದು.

ಈ) (ಸಿ)ಗೆ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಧಾರವಾಡ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 450 (645)

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿನ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರುಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಇ) ವೈದ್ಯರುಗಳ ಕೊರತೆ ನೀಗಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಡಾ॥ ಹೆಚ್.ಪಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಧಾರವಾಡ ಜಿಲ್ಲೆಯಲ್ಲಿ 68 ವೈದ್ಯರ ಹುದ್ದೆ ಖಾಲಿ ಇವೆ. ತಾಲ್ಲೂಕುವಾರು ಹುದ್ದೆ ವಿವರ ಹಿಂದೆ ಲಗತ್ತಿಸಿದೆ.

ಆ) ಸ್ನಾತಕೋತ್ತರ ವ್ಯಾಸಂಗ ಮುಗಿಸಿ ಬಂದ ವೈದ್ಯರಿಂದ, ಗುತ್ತಿಗೆ ಆಧಾರದ ವೈದ್ಯರಿಂದ ಮತ್ತು ಲೋಕಸೇವಾ ಆಯೋಗದಿಂದ ಆಯ್ಕೆಯಾದ ವೈದ್ಯರಿಂದ ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುತ್ತಿದೆ.

ಇ) ಲೋಕಸೇವಾ ಆಯೋಗದಿಂದ ಈಗಾಗಲೇ ವೈದ್ಯರನ್ನು ಸಂದರ್ಶನಕ್ಕೆ ಕರೆದಿದ್ದು ಸ್ನಾತಕೋತ್ತರ ವೈದ್ಯರಿಂದ ಮತ್ತು ಗುತ್ತಿಗೆ ಆಧಾರದ ವೈದ್ಯರಿಂದ ಖಾಲಿ ಹುದ್ದೆಗಳನ್ನು